"ಅಟೆಂಷನ್ ಪ್ಲೀಸ್ (ಲಿಂಗ -ಲಿಂಗತ್ವ -ಲೈಂಗಿಕತೆ )"
ಪುಸ್ತಕ ಬಿಡುಗಡೆ ಕಾರ್ಯಕ್ರಮ






ಆಯೋಜನೆ :ಒಂದೆಡೆ ಸಂಸ್ಥೆ

ದಿನಾಂಕ :16-04-2023

ಸಮಯ :ಸಂಜೆ 4 ರಿಂದ 6

ಸ್ಥಳ :ಉದ್ಯಾನವನ,            ಆಶಿರ್ವಾದ್, ಬೆಂಗಳೂರು.

ಮುಖ್ಯ ಅತಿಥಿಗಳು :

ಶ್ರೀಮತಿ ಕವಿತಾ ಲಂಕೇಶ್
ಚಲನಚಿತ್ರ ನಿರ್ದೇಶಕಿ, ಸಮುದಾಯದ ಬೆಂಬಲಿಗರು.

ಶ್ರೀಮತಿ ಅಕ್ಷತಾ ಪಾಂಡವಪುರ,
ಲೇಖಕಿ, ರಂಗಭೂಮಿ ಕಲಾವಿದೆ ಮತ್ತು ನಟಿ

ಶ್ರೀ ಕಾರ್ತಿಕ್ ಹೆಬ್ಬಾರ್
ರಂಗಕರ್ಮಿ ಮತ್ತು ಹೋರಾಟಗಾರರು

ಶ್ರೀ ಚಾಂದ್ ಪಾಷ
ಕವಿ ಮತ್ತು ಲೇಖಕರು

ಕುಮಾರಿ ಅಭಿದಾ ಬೇಗಂ
ಕರ್ನಾಟಕ ಅಂತರ್ಲಿಂಗಿ ಅಸೋಸಿಯೇಷನ್, ಪ್ರತಿನಿಧಿ

ಶ್ರೀ ಪೃಥ್ವಿ
ಲಿಂಗಪರಿವರ್ತಿತ ಗಂಡು, ಪ್ರತಿನಿಧಿ

ಲೇಖಕಿಯರು :

ಡಾ. ಅಕ್ಕಯ್ ಪದ್ಮಶಾಲಿ
ಮತ್ತು
ಮಾಳವಿಕಾ (ಲಕ್ಷ್ಮಣ್ ಕನಕುಂಟ್ಲಾ ), ಒಂದೆಡೆ.

ನಿರೂಪಣೆ :ಕುಮಾರಿ ರಕ್ಷಿತಾ, ಒಂದೆಡೆ

ಸರಿಯಾಗಿ ಸಂಜೆ 4ಗಂಟೆಗೆ ಅಹ್ಲಾದಕಾರ ಪ್ರಕೃತಿಯ ಮಡಿಲಲ್ಲಿ ಪ್ರಾರಂಭವಾದ ಈ ಕಾರ್ಯಕ್ರಮದಲ್ಲಿ ಸರಿಸುಮಾರು 50 ಜನ ಸಮುದಾಯದ ವಿವಿಧ ಪ್ರಕಾರಗಳ ಪ್ರತಿನಿಧಿಗಳು, ಖ್ಯಾತನಾಮರು, ಸಮುದಾಯೇತರರು ಭಾಜಾನರಾಗಿದ್ದರು.

ಎಲ್ಲರ ಸಮಾಕ್ಷಮದಲ್ಲಿ ಪ್ರಕೃತಿಯ ಮಡಿಲಲ್ಲಿ ಈ ಪುಸ್ತಕ ಕಾರ್ಯಕ್ರಮಕ್ಕೆ ಆಗಮಿಸಿದ ನಮ್ಮ ಶ್ರೇಯೋಭಿಲಾಷಿಗಳಿಂದ ಬಿಡುಗಡೆಗೊಂಡಿತು.

ಪ್ರಸ್ತವಿಕ ನುಡಿ:
ಶ್ರೀಮತಿ ಅನೂರಾಧ, ಹೈಕೋರ್ಟ್ ಉದ್ಯೋಗಿನಿ

ಆರಂಭದಲ್ಲಿ ನಮ್ಮ ಸಮುದಾಯ ಮುಖ್ಯವಾಹಿನಿಗೆ ಬರಲು ಅವಕಾಶ ತುಂಬಾ ಕಮ್ಮಿ ಇದ್ದವು. ಗೌರವ ಇರಲಿಲ್ಲ. ಗೌರ್ಮೆಂಟ್ ಆಫೀಸುಗಳಲ್ಲಿ ಕೆಲಸಗಳ ಆಗಬೇಕಾದರೆ ದುಡ್ಡು ಕೇಳುತ್ತಿದ್ದರು. ನಂತರದಲ್ಲಿ ಒಂದೆಡೆ ಸಂಸ್ಥೆವತಿಯಿಂದ ಮೈಸೂರು ಪೊಲೀಸ್ ಅಕಾಡೆಮಿಯಲ್ಲಿ ನಾವು  ಸೆಷನ್ ತೆಗೆದುಕೊಳ್ಳಬೇಕಾದರೆ ಶ್ರೀ ಭಾಸ್ಕರ್ ಸಾಹೇಬರು ಶ್ರೀ ಕುಲದೀಪ್ ಸರ್ ಅವರು ನಮಗೆ ಬೆಂಬಲ ಕೊಟ್ಟರು. ಸಮುದಾಯದ ಜನರ ಕೌಶಲ್ಯ ಅಭಿವೃದ್ಧಿ ತರಬೇತಿಗಳನ್ನು ಕೊಡಬೇಕಂತ ನಾವು ವಿನಂತಿ ಮಾಡಿಕೊಂದಿದ್ದೇವೆ. ಶಿಕ್ಷಣ ವಲಯದಲ್ಲಿಯೂ ಸಾಕಷ್ಟು ವಕಲತ್ತುಗಳನ್ನು ಮಾಡಿದ್ದೇವೆ. ಒಂದು ಪರ್ಸೆಂಟ್ ರಿಸರ್ವೇಶನ್ ಬಂತು ನಮಗೆ. ಪೊಲೀಸ್ ಆಗಬೇಕಾದರೆ ಬೇಕಾಗುವಂತ ಫಿಟ್ನೆಸ್ ಮತ್ತು ತರಬೇತಿ ಇವುಗಳು ನಮ್ಮ ಶಸ್ತ್ರ ಚಿಕಿತ್ಸೆಗೆ ಒಳಗಾದಂತ

ವ್ಯಕ್ತಿಗಳಿಂದ ಓಡೋದು,ತುಂಬಾ ಹೊತ್ತು ನಿಲ್ಲುವುದು, ವೈಟ್ ಎತ್ತುವ ಅಂತದ್ದು ಸಾಧ್ಯ ಇಲ್ಲ. ಈಗ ನಾನು ಹೈಕೋರ್ಟ್ ನಲ್ಲಿ ಕೆಲಸ ಮಾಡ್ತಾ ಇದ್ದೀನಿ. ಒಂದೆಡೆ ಸಂಸ್ಥೆ 10 ಹಲವಾರು ವಲಯಗಳಲ್ಲಿ ಸುಧೀರ್ಘವಾಗಿ ಮಾಡಿರುವ ಕೆಲಸಗಳಿಂದ ಎಲ್ಲೆಡೆ ಗುರುತಿಸಿಕೊಂಡಿದೆ. ನಮ್ ಜನ ಎಲ್ಲಾದ್ರೂ ಕಂಡ್ರೆ ದಯವಿಟ್ಟು ಅವರಿಗೊಂದು ಅವಕಾಶ ಕೊಡಿ ನಿಮ್ಮ ಮಧ್ಯದಲ್ಲಿ ಬೆಳೆಯೋದಕ್ಕೆ ಬದುಕುವುದಕ್ಕೆ ಅವಕಾಶ ಮಾಡಿಕೊಡಿ  ಅಂತ ವಿನಂತಿ ಮಾಡಿಕೊಳ್ಳುತ್ತೇನೆ ಎಂದು ಒಂದೆಡೆ ಸಂಸ್ಥೆಯನ್ನು ಸಂಕ್ಷಿಪ್ತವಾಗಿ ಪರಿಚಯಿಸಿದರು.

ಕುಮಾರಿ ರಕ್ಷಿತಾ :



ನಿಧಾನವೇ ಪ್ರಧಾನ,
Talk Less work more ಇವುಗಳೇ ನಮ್ಮ ಮೂಲ ತತ್ವಗಳು. ಕೇವಲ ಬಾಯಿ ಮಾತಿನ ಭಾಷಣಗಳಿಗೆ ಸೀಮಿತವಾಗಿರದೇ ನಾವು ಎಲ್ಲಿ ಹೋಗ್ಲಿ ನಮ್ಮ ಜನಕ್ಕೆ ಕೆಲಸ ಕೊಡಿ ಅಂತ ಹೇಳಿ ಬೇಡಿಕೆಯನ್ನು ಇಟ್ಟು,ಆ ಬೇಡಿಕೆ ಈಡೇರಿದ ನಂತರ ಆ ಸ್ಥಳಗಳಿಗೆ ಹೋಗಿರುತ್ತೇವೆ.

ಕವಿತಾ ಲಂಕೇಶ್ :



ಸಿನಿಮಾ ರಂಗದಲ್ಲಿ ನಾವು ಕೆಲಸ ಮಾಡ್ತಾ ಇದ್ದೀವಿ. ಮಹಿಳೆಯರು ಮತ್ತು ಅವರ ಸಾಮರ್ಥ್ಯಗಳಿಗೆ ಅಷ್ಟೇನೂ ಬೆಂಬಲ ಇಲ್ಲ. ಆದರೆ ಟ್ರಾನ್ಸ್‌ಜೆಂಡೆರ್ ಕಮ್ಯುನಿಟಿಗೆ ಇರುವಷ್ಟು ತಾರತಮ್ಯವಾಗಲಿ ಕಷ್ಟಗಳಾಗಲಿ ನಮಗೆ ಇಲ್ಲ. ನನಗೆ ಮೊದಲು ಈ ಸಮುದಾಯದ ಬಗ್ಗೆ ಗೊತ್ತಿರಲಿಲ್ಲ. ನಮ್ಮ ಅಕ್ಕ ಗೌರಿ ಲಂಕೇಶ್ ಅವರಿಂದ ಈ ಸಮುದಾಯದ ಬಗ್ಗೆ ನನಗೆ ಗೊತ್ತಾಯ್ತು. ನಾನು ಜಗಳ ಮಾಡಿದೆ. ಟ್ರಾನ್ಸ್ಜಂ ಡರ್ ಕಮ್ಯುನಿಟಿ ಅವರು ಯಾಕೆ ಬೆಗಿಂಗ್ ಮಾಡುತ್ತಾರೆ? ಯಾಕೆ ಸೆಕ್ಸ್ವರ್ಕ್ ಮಾಡುತ್ತಾರೆ? ಅವರು ಬೇರೆ ಎಲ್ಲರ ತರ ಇರಬಹುದಲ್ಲ ಅಂತ. ಆಗ ಅವರು ನನಗೆ ಒಂದು ಪುಸ್ತಕ ಕೊಟ್ಟರು. ಅದು ರೇವತಿಯವರ ಆತ್ಮ ಚರಿತ್ರೆ. ಇತ್ತೀಚೆಗೆ ನಾನು ಅಕ್ಕಯ್ ಅವರ ಆತ್ಮಚರಿತ್ರೆಯಾದ ಕರುಣೆಗೊಂದ್ ಸವಾಲನ್ನು ಓದಿದೆ. ಸಮುದಾಯದ ಬಗ್ಗೆ ತುಂಬಾ ವಿಷಯಗಳನ್ನು ತಿಳಿದುಕೊಂಡೆ. ಅಕ್ಕಯ್ಯ ಅವರ ಜೊತೆಗೆ ನಿರಂತರವಾಗಿ ಕೆಲಸ ಮಾಡ್ತಾ ಇದ್ದೀನಿ. ಅವರ ಬೆಂಬಲ ನಮಗಿದೆ

ನಮ್ಮ ಬೆಂಬಲ ಯಾವಾಗಲೂ ಅವರಿಗಿದೆ.  "ಅವನಲ್ಲ ಅವಳು " ಈ ಸಿನಿಮಾ ಮಾಡಬೇಕು ಅಂತ ತುಂಬಾ ಆಸೆ ಇತ್ತು ಬಟ್ ಲಿಂಗದೇವರವರು ಮಾಡಿಬಿಟ್ಟಿದ್ದಾರೆ. ಈಗ ಅಕ್ಕ ಇವರ ಜೀವನ ಚರಿತ್ರೆಯನ್ನು ಸಿನಿಮಾ ಮಾಡಬೇಕು ಅನ್ನೋದು ಆಸೆ ಇದೆ. ಸಿನಿಮಾ ಇಂಡಸ್ಟ್ರಿಯಲ್ಲಿ ತುಂಬಾ ಜನ ಟ್ರಾನ್ಸ್‌ಜೇಂಡರ್ಸ್ ಕೆಲಸ ಮಾಡ್ತಾ ಇದ್ದಾರೆ. ಆರಾಧನಾ ಅಂತ ಒಬ್ಬ ವ್ಯಕ್ತಿ. ಮೊದಲ ಬಾರಿಗೆ ಕ್ಯಾಮೆರಾವನ್ನು ಫೇಸ್ ಮಾಡಿದರು ಕೂಡ ಅದ್ಭುತವಾಗಿ ನಟಿಸಿದ್ದಾರೆ. ಹೀಗೆ ಪ್ರತಿಭೆ ಇರುವಂತಹ ಟ್ರಾನ್ಸ್‌ಜೆಂಡೆರ್ಸ್ ಗೆ ನಾವು ಅವಕಾಶವನ್ನು ಕೊಡುತ್ತೇವೆ. ಇದುವರೆಗೆ ಈ ಸಮುದಾಯಕ್ಕೆ ಕೆಟ್ಟ ಪಾತ್ರಗಳನ್ನು ಕೊಟ್ಟು ಸಿನಿಮಾ ಮಾಡಿಸಿರುವ ಕುರಿತು ನಮಗೆ ವಿರೋಧವಿದೆ. ಆದರೆ ಅವರಿಗೆ ಒಂದು ಒಳ್ಳೆಯ ರೀತಿಯ ಪಾತ್ರಗಳನ್ನು ಕೊಟ್ಟು ಮಾಡಿಸುವುದರಿಂದ ಸಮಾಜದಲ್ಲಿ ಅವರ ಬಗ್ಗೆ ಇದ್ದ  ಅಪನಂಬಿಕೆಗಳನ್ನು ನಾವು ಹೋಗಲಾಡಿಸಬಹುದು. ಯಾರಾದರೂ ಆಕ್ಟ್ ಮಾಡೋರಿದ್ರೆ ಖಂಡಿತ ಅವರಿಗೆ ಅವಕಾಶವನ್ನು ಕೊಡುತ್ತೇವೆ. ಅಟೆಂಷನ್ ಪ್ಲೀಸ್ ಪುಸ್ತಕ ಮೊನ್ನೆ ತಾನೆ ನನ್ನ ಕೈಗೆ ಬಂತು. ಈ ಟೈಟಲ್ ನನಗೆ ತುಂಬಾ ಇಷ್ಟ ಆಯ್ತು. ಈ ತರದ ಪುಸ್ತಕಗಳು ಹೆಚ್ಚು ಹೆಚ್ಚು ಬರಬೇಕು ಮತ್ತು ಇವುಗಳು ಪಠ್ಯಕ್ರಮದಲ್ಲಿ ಸೇರಬೇಕು ಮಕ್ಕಳು ಓದಬೇಕು. ಈ ಸಮುದಾಯದ ಕುರಿತಾಗಿ ತಿಳ್ಕೊಬೇಕು.ಇವರ ಬಗ್ಗೆ ಇದ್ದ ತಾರತಮ್ಯ  ಕಮ್ಮಿ ಆಗಬೇಕು. ಟ್ರಾನ್ಸ್ಜೆಂಡರ್ ಯಾಕೆ, ಒಬ್ಬ ಮಹಿಳೆ ಜೊತೆಗೆ ಯಾವತರ ವರ್ತನೆ ಮಾಡಬೇಕು ಅನ್ನೋದು ಕೂಡ ಸ್ಕೂಲುಗಳಲ್ಲಿ, ಗೌರ್ಮೆಂಟ್ ಸ್ಕೂಲ್ ಇಂದ ಹಿಡಿದು ಎಲ್ಲಾ ಸ್ಕೂಲ್ ಗಳಲ್ಲಿ ಕಳಿಸಬೇಕು. ಬೆನ್ನುಡಿಯಲ್ಲಿ ಚಾಂದ್ ಪಾಷಾ ಅವರು ಬರೆದಿರುವ " ಈ ಸಮುದಾಯವು ಸಮಾಜದಿಂದ ಕರುಣೆಯನ್ನು ನಿರೀಕ್ಷಿಸುವುದಿಲ್ಲ ಆದರೆ ನಿಮ್ಮ ಜೊತೆ ಸಮಾನರಾಗಿ ಬಾಳುವುದಕ್ಕೆ ಅವಕಾಶ ಕೊಡಿ ಎಂದು ಕೇಳಿಕೊಂಡಿದ್ದಾರೆ " ಎಂಬ ವಿಷಯ ತುಂಬಾ ಇಷ್ಟವಾಯಿತು. ಪುಸ್ತಕ ತುಂಬಾ ಚೆನ್ನಾಗಿದೆ ಈ ತರದ ಸಮುದಾಯದ ಬಗ್ಗೆ ಬೆಳಕು ಚೆಲ್ಲುವಂತ ಪುಸ್ತಕಗಳು ನಿರಂತರವಾಗಿ ಬರಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಅಕ್ಷತಾ ಪಾಂಡವಪುರ :



ಇಲ್ಲಿ ಸಮಾನತೆಯನ್ನು ಕಾಣುತ್ತಿದ್ದರೆ ನನಗೆ ತುಂಬಾ ಸಂತೋಷವಾಗುತ್ತಿದೆ. ಸಹಜವಾಗಿ ನಾನು ಯಾವುದೇ ಇವೆಂಟ್ಗಳಿಗೆ ಹೋಗುವುದಿಲ್ಲ ಆದರೆ ಈ ಈ ಪುಸ್ತಕ ನನಗೆ ತುಂಬಾ ಇಷ್ಟವಾಗಿರುವುದರಿಂದ ಮತ್ತು ಅಕ್ಕಯ್ ಅವರ ಸಲುವಾಗಿ ಬಂದಿದ್ದೇನೆ. ಅಕ್ಕಯ್ ಅವರದು ತಾಯಿ ಮನಸ್ಸು. ಒಂದೆಡೆಯನ್ನು ಸಂಸ್ಥೆಯನ್ನು ಸ್ಥಾಪಿಸಿ ಒಳ್ಳೆ ಕೆಲಸಗಳನ್ನು ಮಾಡುತ್ತಿದ್ದಾರೆ. ಅಯ್ಯೋ ನಮಗೆಷ್ಟು ಕಷ್ಟಗಳಿದೆ ಅಂತ ನಾವು ತುಂಬಾ ಸಂದರ್ಭಗಳಲ್ಲಿ ಅಂದುಕೊಂಡಿದ್ವಿ.ಆದ್ರೆ ಈ ಒಂದು ಸಮುದಾಯಕ್ಕೆ ಅದೇಷ್ಟು ಕಷ್ಟಗಳಿವೆ ಅಂದರೆ ಇವರ ಕಷ್ಟದ ಮುಂದೆ ನಮ್ಮ ಕಷ್ಟ ಏನೂ ಅಲ್ಲ. ನಾನು ಎರಡು ದಿನ ಅಟೆಂಶನ್ ಪ್ಲೀಸ್ ಪುಸ್ತಕವನ್ನು ಓದುವುದರಲ್ಲಿ ಕಳೆದು ಹೋಗಿದ್ದೆ. ಪುಟ್ಟಣ್ಣಯ್ಯನವರು ಒಂದು ಮಾತನ್ನು ಹೇಳುತ್ತಾರೆ ಏನೆಂದರೆ "ಒಂದು ಕಡೆ ನಾವು ಒಂದು ಹೋರಾಟಕ್ಕೆ ಹೋದಾಗ ಪೊಲೀಸರು ನಮ್ಮ ಮೇಲೆ ದಬ್ಬಾಳಿಕೆಯನ್ನು ಮಾಡುತ್ತಿದ್ದರು ಆಗ ಅಲ್ಲಿರುವ ಒಬ್ಬ ಟ್ರಾನ್ಸ್‌ಜೇಂಡೆರ್ ಮಹಿಳೆ ನನ್ನ ಮೇಲೆ ದಬ್ಬಾಳಿಕೆ ಮಾಡಲು ನೀ ಯಾರು? ನಮ್ಮಂತೆ ಇರುವ ಒಬ್ಬರನ್ನು ಕರೆದುಕೊಂಡು ಬಂದು ನಮ್ಮನ್ನು ಅರೆಸ್ಟ್ ಮಾಡಬೇಕೆ ಹೊರತು ನೀವು ನಮ್ಮನ್ನು ಮುಟ್ಟಬಾರದು ಎಂದು ತಾಕೀತು ಮಾಡಿದಳು. ಅದು ನಮಗೆ ಆ ಸಮಯದಲ್ಲಿ ತಮಾಷೆ ಅನಿಸಿದ್ರೂ ಕೂಡ ಎಂಥ ಒಂದು ಅಪಿಲನ್ನು ಅವರು ಮಾಡಿದ್ದಾರೆ ಅಂತ ಹೆಮ್ಮೆ ಆಯ್ತು ನಮಗೆ. ನಮ್ಮಂತ ಜನಕ್ಕೂ ಕೂಡ ನಿಮ್ಮ ಡಿಪಾರ್ಟ್ಮೆಂಟ್ ನಲ್ಲಿ ಕೆಲಸ ಕೊಡಿ ಅನ್ನೋದನ್ನ ಅವರು ಈ ಮೂಲಕ ಪ್ರತಿಪಾದಿಸಿದರು".

ಈ ಪುಸ್ತಕದ ಅರ್ಪಣೆಯು ತುಂಬಾ ಚೆನ್ನಾಗಿದೆ ಈ ಅರ್ಪಣೆಯನ್ನು ನಾನು ಓದಿದ ನಂತರ ಪುಸ್ತಕವನ್ನು ಮುಚ್ಚಿ ಐದು ನಿಮಿಷಗಳ ಕಾಲ ಯೋಚಿಸಿದೆ. ಈ ವಿಶಾಲ ನಾಗರಿಕ ಸಮಾಜಕ್ಕೆ ಮತ್ತು ಸಮಸ್ತ ಮನುಕುಲಕ್ಕೆ ಈ ಪುಸ್ತಕವನ್ನು ಸಮರ್ಪಣೆ ಮಾಡಿದ್ದು

ತುಂಬಾ ವಿಶೇಷ ಅನ್ನಿಸಿತು. ತಮ್ಮ ತಂದೆ-ತಾಯಿ ಅಣ್ಣ ಯಾರೋ ಒಬ್ಬರಿಗೆ ಅರ್ಪಣೆ ಮಾಡುವುದು ಬದಲಾಗಿ ತಮ್ಮನ್ನು ಕಡೆಗಣಿಸಿದಂತಹ ಒಂದು ಸಮಾಜಕ್ಕೆ ಮನುಕೂಲಕ್ಕೆ ಅರ್ಪಣೆ ಮಾಡಿ ಶ್ರೇಷ್ಠತೆಯನ್ನು ಮೆರೆದಿದ್ದಾರೆ. ಅಕ್ಕಯ್ ಅವರು ನನಗೆ ಕರೆ ಮಾಡಿ ಪುಸ್ತಕದ ಹೆಸರು "ಅಟೆಂಷನ್ ಪ್ಲೀಸ್" ಎಂದು ಹೇಳಿದಾಗ ನಾನು ವಾವ್ ಅಂತ ಹೇಳಿದೆ. ಕೆನ್ನೆಗೆ ಹೊಡೆದಂಗೆ ಇದೆ ಶೀರ್ಷಿಕೆ . ಇದೊಂದು ಪರ್ಫೆಕ್ಟ್ ಟೈಟಲ್ಲ ಅದು ಎಲ್ಲಿ ಹುಡುಕಿದ್ದಿರೋ?ಯಾರು ಹೇಳಿದರೋ? ಎಂಬ ಪ್ರಶ್ನೆಗಳು  ನನಗೆ ಕಾಡಿದವು , ಯಾಕೆಂದರೆ ಪುಸ್ತಕ ಎಲ್ಲ ಓದಿದೆ ನಂತರ ನೂರಕ್ಕೆ ನೂರರಷ್ಟು ಸರಿಯಾದ ಒಂದು ಶೀರ್ಷಿಕೆ ಇದಾಗಿತ್ತು. ಆಶಯ ನುಡಿಯು ಸಂಪೂರ್ಣವಾಗಿ ಪುಸ್ತಕವನ್ನು ಪರಿಚಯಿಸುತ್ತದೆ. ಪುಸ್ತಕದ ಗುರಿ ಉದ್ದೇಶಗಳು ಆಶಯಗಳನ್ನು ತಿಳಿಸಿಕೊಡುತ್ತದೆ.

ಇನ್ನು ಮೊದಲನೇ ಅಧ್ಯಾಯ ಡಾಕ್ಟರ್ ಅಕ್ಕಯ್ ಪದ್ಮಶಾಲಿಯವರ ಸಂವಾದ. ಪುಸ್ತಕವನ್ನು ಇದೇ ತರ ಬರಿಬೇಕು, ಇದೇ ವಿಷಯ ತಗೋಬೇಕು ಅನ್ನೋ ಒಂದು ಸಾಂಪ್ರದಾಯಿಕವಾದಂತ  ಕಟ್ಟಳೆಗಳನ್ನು ಬ್ರೇಕ್ ಮಾಡಿ ಒಂದು ವಿಭಿನ್ನವಾಗಿ ವಿಶೇಷವಾಗಿ ಹೊರಬಂದಿದೆ ಅಟೆಂಶನ್ ಪ್ಲೀಸ್ ಪುಸ್ತಕ. ಇಲ್ಲಿ ನಾಟಕ,ಕವನ, ಜೀವನ, ಸಂವಾದ, ಸಂದರ್ಶನಗಳು ಮತ್ತು ಆತ್ಮಕಥನಗಳೂ ಇವೆ . ಈ ಪುಸ್ತಕವನ್ನು ನಾನೊಂದು ರಂಗ ಕರ್ಮಿಯಾಗಿ ಯಾವ ತರ ಪ್ರಸ್ತುತಪಡಿಸಬೇಕೆಂಬುದೇ ದೊಡ್ಡ ಪ್ರಶ್ನೆ. ಈ ಪುಸ್ತಕದಲ್ಲಿ ತುಂಬಾ ಸವಾಲುಗಳಿವೆ. ನನಗೆ ಇದರಲ್ಲಿರುವ ಪ್ರತಿಯೊಂದು ಪಾತ್ರಗಳ ಜೊತೆಗೂ ಮಾತಾಡಬೇಕು ಅಂತ ತಕ್ಷಣ  ಅನಿಸಿತು.

ಈ ಪುಸ್ತಕದ ಅಂತರಾಳಕ್ಕೆ ಇಳಿಯುವುದಕ್ಕಿಂತ ಮೊದಲು ಸಮುದಾಯ ಪರಿಚಯವು ಈ ಪುಸ್ತಕವನ್ನು ಸರಳವಾಗಿ ಅರ್ಥೈಸಿಕೊಳ್ಳಲಿಕ್ಕೆ ಬೇಕೇ ಬೇಕಾಗುತ್ತದೆ. ಹೀಗೆ ಪರಿಚಯವನ್ನು ಕೊಟ್ಟಿದ್ದರಿಂದಲೇ ಈ ಒಂದು ಪುಸ್ತಕ ನಮಗೆ ಸ್ಪಷ್ಟವಾಗಿ ಅರ್ಥವಾಗುತ್ತದೆ.

ಮಾಳವಿಕಾ ಅವರು ಸಂದರ್ಶನದೊಂದಿಗೆ ಅಧ್ಯಾಯ 2 ಆರಂಭವಾಗುತ್ತದೆ . ಈ ಪುಸ್ತಕದ ಪ್ರಮುಖ ಹೀರೊ ಹೀರೋಯಿನ್ ಎಲ್ಲವೂ ಕೂಡ ಮಾಳವಿಕಾ. ಗಾಂಧಿ ಮತ್ತು ಅಂಬೇಡ್ಕರ್ ಅವರು ಮುಖ ಮುಖಮುಖಿ ಆದಾಗ ನಡೆಯುವಂತಹ ಒಂದು ಸಂವಾದ ಸಂದರ್ಶನಕ್ಕೆ ಸರಿ ಸಮಾನವಾದ ಒಂದು ಸಂವಾದ ಸಂದರ್ಶನ ಇದು. ಅಷ್ಟು ಆಸಕ್ತಿದಾಯಕವಾಗಿದೆ ಮತ್ತು ಜೀವಂತಿಕೆಯಿಂದ ಕೂಡಿದೆ.

2014 ರಿಂದ ನಮ್ಮ ಸಮುದಾಯದ ಮೇಲೆ ಆಗಿರುವ ಮಾನವ ಹಕ್ಕುಗಳ ಉಲ್ಲಂಘನೆ ಕುರಿತಾಗಿ ಪ್ರಸ್ತಾಪವಾಗಿದೆ. ಸೆಕ್ಷನ್ 377ರ ಬಗ್ಗೆ ಕೂಡ ಈ ಪುಸ್ತಕದಲ್ಲಿ ಮಾಹಿತಿ ಇದೆ. ಒಂದೆಡೆ ಸಂಸ್ಥೆಯಿಂದ ಸರ್ಕಾರಿ ಶಾಲೆಗಳು,ಬೇರೆ ಬೇರೆ ಕಾಲೇಜುಗಳು,ಯುನಿವರ್ಸಿಟಿ ಎಲ್ಲಾ ಕಡೆನೂ ಕೂಡ ಅರಿವನ್ನು ಮೂಡಿಸುವಂತಹ ಒಂದು ಕಾರ್ಯಕ್ರಮ ಮಾಡಬೇಕು. ಕೇವಲ ಒಂದು ಪುಸ್ತಕವನ್ನು ಕೈಯಲ್ಲಿ ಕೊಟ್ಟರೆ ಸಾಕಾಗುವುದಿಲ್ಲ ಆ ಪುಸ್ತಕವನ್ನು ವಿವರಿಸಬೇಕು,ವಿಶ್ಲೇಷಣೆ ಮಾಡಬೇಕು, ವಿಮರ್ಶೆ ಮಾಡಬೇಕು ಮತ್ತು ವಿದ್ಯಾರ್ಥಿಗಳೊಂದಿಗೆ ಚರ್ಚೆ ಮಾಡಬೇಕು. ಈ ಪುಸ್ತಕ ನೈಜವಾಗಿ ಅಷ್ಟೇ ಬೋಲ್ಡ್ ಆಗಿದೆ. ನಿಜ ಜೀವನದಲ್ಲಿ ಎಷ್ಟೋ ವಿಷಯಗಳನ್ನು ನಾವು ಮಾತಾಡೋದಕ್ಕೆ ಹಿಂಜರಿಕೆಯನ್ನು ತೋರಿಸುವ ವಿಷಯಗಳ ಕೂಡ ಇಲ್ಲಿ ಬೋಲ್ಡ್ ಆಗಿ ಚರ್ಚೆಗೆ ಬಂದಿವೆ. ಕರ್ನಾಟಕದ ಉದ್ದಗಲಕ್ಕೂ ಇರುವ ಜನರ ಧ್ವನಿಯನ್ನು ಇಲ್ಲಿ ಕೇಳಿಸಬೇಕು. ಇಲ್ಲಿ ಚುನಾವಣೆ ಗುರುತಿನ ಚೀಟಿ ವಿತರಣೆದ ಬಗ್ಗೆ ಒಂದು ಪತ್ರವನ್ನು ಚುನಾವಣಾ ಆಯುಕ್ತರಿಗೆ ಬರೆದಿದ್ದು ಕಂಡುಬರುತ್ತದೆ ಎಷ್ಟು ಸೊಗಸಾಗಿದೆ ಈ ಪತ್ರ ಅಂದ್ರೆ ಈ ಒಂದು ಪತ್ರವನ್ನು ಇಟ್ಟುಕೊಂಡೆ ಒಂದು ನಾಟಕ ಮಾಡಬಹುದು.

ರಂಗಭೂಮಿ ಕಲಾವಿದೆ ಶ್ರೀಮತಿ ಸೋನು ಯಾದಗಿರಿ ಜಿಲ್ಲೆ. ಇವರ ಒಂದು ಅನಿಸಿಕೆ ತುಂಬಾ ಇಷ್ಟ ಆಯ್ತು ನನಗೆ. ಅವರು ಹೇಳುತ್ತಾರೆ "ಸುಮಾರು 50 ನಾಟಕಗಳನ್ನು ಮಾಡಿದ್ದೇನೆ.ಡಿಸಿ ಮುಂದೆ ನಾಟಕ ಮಾಡಿದಾಗ ನನಗೆ ಮೆಚ್ಚುಗೆಯನ್ನು ಸೂಚಿಸಿದರು. ನಾವೆಷ್ಟು ದುಡ್ಡು ಗಳಿಸುತ್ತೇವೆ ಅನ್ನೋದು ಮುಖ್ಯ ಅಲ್ಲ. ಹೇಗೆ ಬದುಕುತ್ತೇವೆ ಅನ್ನೋದು  ಮುಖ್ಯ ಎಂಬ ಸಂದೇಶವನ್ನು ಕೊಡುತ್ತಾರೆ".ಇಂತಹ ವ್ಯಕ್ತಿಗಳಿಗೆ ಏನಾದರೂ ಅವಕಾಶಗಳನ್ನು ಮಾಡಿಕೊಡಬೇಕು. ಈಗ ನಾನು ಒಂದೆಡೆಯಾ ಭಾಗವಾಗಿದ್ದೇನೆ ಎಂದು ಹೆಮ್ಮೆಯಿಂದ ಹೇಳುತ್ತೇನೆ.

ಪ್ರೊ.ವಿ.ಎಸ್. ಎಲಿಜಬೆತ್ ಅವರು ಮದುವೆ ಕುರಿತು ಒಂದು ಮಾತನ್ನು ಹೇಳುತ್ತಾರೆ.ಮದುವೆಯಾಗುವವರೆಗೂ ಮದುವೆಯಾಗು ಅಂತಾರೆ.ಮದುವೆಯಾದ ನಂತರ ನಿರೀಕ್ಷೆಗಳು ಹುಟ್ಟಿಸಬೇಕು ಅನ್ನೋದು.ಹುಟ್ಟಿಸಿದ ನಂತರ ಅದು ಹೆಣ್ಣೋ ಅಥವಾ ಗಂಡೋ ಅನ್ನೋದು. ಹುಟ್ಟಿದ ಮಗು ಕೂಡ ಲಿಂಗ ತಾರತಮ್ಯವನ್ನು ಅಂಟಿಸುವಂತಹ ಕೀಳು ಮಟ್ಟಕ್ಕೆ ಈ ಸಮಾಜ ಹೋಗಿದೆ ಅನ್ನುವ ವಿವರಣೆ ಮನ ಮುಟ್ಟುತ್ತದೆ.

ಕುಮಾರಿ ಜುಬೇದಾ ಬೇಗಂ ಅವರು
ತಿರಸ್ಕೃತಳು ಅನ್ನೋ ಒಂದು ಕವನವನ್ನು ಓದುತ್ತಾರೆ. ತುಂಬಾ ಅದ್ಭುತವಾಗಿದೆ. ಈ ಕವನವನ್ನು ಮಾಳವಿಕಾ ಅವರು ಬರೆದಿರುತ್ತಾರೆ.

ಚಾಂದ್ ಪಾಷಾ ಲೇಖಕರು ಮತ್ತು ಕವಿಗಳು :




ಅಕ್ಕಯ್ ಮತ್ತು ಮಾಳವಿಕಾ ಅವರು ನನಗೆ ಕಾನ್ಫರೆನ್ಸ್ ಕಾಲ್ ಹಾಕಿ ಪುಸ್ತಕ ಬರಿತಾ ಇದೀವಿ. ನಿಮ್ಮ ಸಲಹೆ,ಸೂಚನೆಗಳು ಮತ್ತು ಮಾರ್ಗದರ್ಶನ ಬೇಕು ಎಂದು ಕೇಳಿದರು. ತುಂಬಾ ತುಂಬಾ ಬೋಲ್ಡ್ ಆಗಿದ್ದವು ಆ ಪುಸ್ತಕದ ಪದಗಳು.ಆ ಪದಗಳನ್ನು ನಾವು ಬದಲಾಯಿಸಿದ್ವಿ. ಯಾಕಂದ್ರೆ ಎಲ್ಲರೂ ಈ ಪುಸ್ತಕವನ್ನು ಓದುವಂತೆ ಆಗ್ಬೇಕು.ವಿಷಯ ಮುಟ್ಟಬೇಕು.ಪುಸ್ತಕ ಎಲ್ಲರಿಗೂ ತಲುಪಬೇಕು ಅನ್ನೋ ಕಾರಣಕ್ಕೆ ನಾವು ಸ್ವಲ್ಪ ಬೋಲ್ಡ್ ಪದಗಳನ್ನು ತೆಗೆದಾಕಿದ್ವಿ. ಇಲ್ಲಿರುವಂಥ ಪ್ರಶಾಂತವಾದ ವಾತಾವರಣವೇ ಸಮಾಜದಲ್ಲಿನೂ ಸೃಷ್ಟಿ ಆಗಬೇಕು ಅಂತ ಸಾಕಷ್ಟು ಜನ ಶ್ರಮಿಸಿದ್ದಾರೆ.ಅದರಲ್ಲಿ ಒಂದೆಡೆ ಸಂಸ್ಥೆಯು ಒಂದಾಗಿದೆ ಎಂದು ಹೇಳುತ್ತೇನೆ. ಅಕ್ಕಯ್ ಅವರ ಆತ್ಮಚರಿತ್ರ ಕರುಣೆಗೊಂದು ಸವಾಲು ಓದಬೇಕಾದರೆ ಎಷ್ಟು ವಿಷಯಗಳನ್ನು ನಾವು ತಿಳಿದುಕೊಂಡಿದ್ದೀವಿ . ಅಂತಹ ಅನೇಕ ಜನರ ಆತ್ಮಕಥನಗಳು ಈ ಒಂದು ಪುಸ್ತಕದಲ್ಲಿವೆ. ಆತ್ಮಕಥನಗಳ ಒಂದು ಸಂಕಲನವಾಗಿದೆ ಈ ಪುಸ್ತಕ.ಅಟೆಂಷನ್ ಪ್ಲೀಸ್ ಸಂಚಿಕೆಗಳು ಮುಂದುವರಿಯುತ್ತವೆ. ಈವರೆಗೂ ನೀವೇ ಹೇಳಿದ್ದೀರಾ ಈಗ ನಾವು ಹೇಳೋದನ್ನ ಕೇಳಿ ಅನ್ನೋ ತರ ಪುಸ್ತಕದ ಟೈಟಲ್ ಇದೆ. ತುಂಬಾ ಹಣಕಾಸಿನ ತೊಂದರೆಯಲ್ಲಿ ಪುಸ್ತಕವನ್ನು ಹೊರ ತಂದಿದ್ದಾರೆ. ಸಾವಿರ ಪ್ರತಿಗಳನ್ನು ಹಾಕಿ ಎಲ್ಲರಿಗೂ ತಲುಪಿಸುವಂತಹ ಜವಾಬ್ದಾರಿ ನನ್ನದು ಎಂದು ಹೇಳಿದರು . ಗ್ರಂಥಾಲಯಗಳ ಸಂಗ್ರಹಣೆಯಾಗಿ ಕೂಡ ಇದನ್ನು ತಲುಪಿಸಬೇಕು. ನಂತರ ಇದು ಸಮುದಾಯತರರಿಗೆ ಹೆಚ್ಚಾಗಿ ತಲುಪಿಸಬೇಕು. ಸಮುದಾಯದವರಿಗೆ ಈ ಕಥೆಗಳೆಲ್ಲ ಗೊತ್ತಿದೆ. ಸಮುದಾಯೇತರರು ಇದರ ಬಗ್ಗೆ ತಿಳಿದುಕೊಳ್ಳಬೇಕು. ಯಾಕಂದ್ರೆ ಸಮುದಾಯವನ್ನು ಶೋಷಿಸದೆ, ಅಣಕಿಸದೆ ಒಪ್ಪಿಕೊಳ್ಳುವುದಕ್ಕಾಗಿ, ಮನ ಪರಿವರ್ತನೆ ಆಗುವುದಕ್ಕಾಗಿ ಸಮುದಾಯವನ್ನು ಸ್ವೀಕರಿಸಲು ಪುಸ್ತಕ ಸಹಾಯಕಾರಿ ಆಗಿದೆ . ಈ ಒಂದು ಪುಸ್ತಕಕ್ಕಾಗಿ ಅತಿ ಹೆಚ್ಚು ಶ್ರಮಿಸಿದವರು ಮಾಳವಿಕಾ ಅವರು . ಕನ್ನಡದಲ್ಲಿ ಇಂಥ ಪುಸ್ತಕಗಳು ಸಿಗುವುದಿಲ್ಲ ಆದರೆ ಇಂಗ್ಲಿಷ್ ನಲ್ಲಿ ಸುಲಭವಾಗಿ ಸಿಗುತ್ತವೆ. ತುಂಬಾ ತಡವಾಗಿ ಕನ್ನಡಕ್ಕೆ ಬರ್ತಾ ಇದೆ ಈ ಪುಸ್ತಕ. ಈಗಲಾದರೂ ಅದು ಬಂದಿದ್ದಕ್ಕೆ ಸಂತೋಷವಾಗಿದೆ. ಈ ಪುಸ್ತಕವನ್ನು ಸಮಾಜಕ್ಕೆ ತಲುಪಿಸುವಂತಹ ಜವಾಬ್ದಾರಿ ನಮ್ಮೆಲ್ಲರಿಗೂ ಇದೆ.

ಶ್ರೀ ಕಾರ್ತಿಕ್ ಹೆಬ್ಬಾರ್ :



ಟ್ರಾನ್ಸ್ಜೆಂಡರ್ ಸಮುದಾಯವನ್ನು ಒಂದೇ ಅಂಬ್ರೆಲಾ ಕೆಳಗೆ ತರುವುದರಿಂದ ಈ ಸಮುದಾಯದ ಬೇರೆ ಬೇರೆ ಐಡೆಂಟಿಟಿಯ್ಸ್ ಮಾಯವಾಗುತ್ತಿವೆ. ಇದನ್ನು ತಪ್ಪಿಸಲು ಎಲ್ಲಾ ಪ್ರಕಾರಗಳ ಪದಗಳ ಬಳಕೆ ಆಗಬೇಕು. ಇಂಗ್ಲಿಷ್ ನಲ್ಲಿ ಈ ಥರದ ಪುಸ್ತಕ ಬೇಕಾದಷ್ಟಿದ್ದರೂ ಕನ್ನಡಕ್ಕೆ ಈ ಪುಸ್ತಕ ಬಹುಮುಖ್ಯವಾಗಿದೆ. ನಾನೊಬ್ಬ ಗೇ ಮ್ಯಾನ್. ನನ್ನ ಚಿಕ್ಕಂದಿನಲ್ಲಿ ನನಗೆ ಓದಲು ಮತ್ತು ನೋಡಲು ಸಿಗದ ನಮ್ಮ ಸಮುದಾಯವನ್ನು ಈಗಿನ ನಮ್ಮ ಸಮುದಾಯಕ್ಕೆ ತೋರಿಸುವುದು ಮತ್ತು ಓದಲು ಒದಗಿಸುವುದು ನನ್ನ ಗುರಿಯಾಗಿದೆ.ಅಟೆಂಷನ್ ಪ್ಲೀಸ್ ಪುಸ್ತಕ ನಾನು puc ಓದುವಾಗ ನನಗೆ ಸಿಕ್ಕಿದ್ದರೆ ನನ್ನ ಜೀವನವೇ ಬೇರೆತರ ಇರುತಿತ್ತು. ಈ ಜಗದಲ್ಲಿ ನಾನು ಒಬ್ಬಂಟಿ ಅನಿಸುತ್ತಿರಲಿಲ್ಲ. ನನಗಿಂತ ಹೆಚ್ಚು ಕಷ್ಟಪಡುವವರು ಅದೆಷ್ಟೋ ಜನ ಇದ್ದಾರೆ ಅನ್ನೋದು ಗೊತ್ತಾಗುತಿತ್ತು. ಕನ್ನಡದಿಂದ ಭಾಷಂತರಿಸಿ ನನ ಸಂಗತಿಯಾದ ಸುಜಯ್ಗೆ ಹೇಳಿದಾಗ ಅವರು ವಾವ್! ಎಷ್ಟು ಬೋಲ್ಡ್ ಆಗಿ ಬರೆದಿದ್ದಾರಲ್ಲ ಅಂದ್ರು. ಈ ಪುಸ್ತಕ ಬರೆಯಲು ತುಂಬಾ ಧೈರ್ಯ ಬೇಕು. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯರ ಲೈಂಗಿಕ ತೃಪ್ತಿ ನಗಣ್ಯ. ಯಾರಾದ್ರೂ ಲೈಂಗಿಕ ಕ್ರಿಯೆಯಲ್ಲಿ ನಿನಗೇನು ಇಷ್ಟ ಅಂತ ಮದುವೆಗೆ ಮುನ್ನ ಕೇಳ್ತಾರ? ಇಲ್ಲ ಆದರೆ ಹೀಗೆ ಕೇಳುವಂತೆ ಆಗಬೇಕು.ಕೇಳಿದ್ರೇನೆ ಈ ಅತ್ಯಾಚಾರಗಳು, ಹಿಂಸೆ, ದೌರ್ಜನ್ಯಗಳು ಕಮ್ಮಿ ಆಗುತ್ತವೆ. ಸೆಕ್ಸ್ ಇಲ್ಲದೇ ಲವ್ ಮತ್ತು ಮದುವೆಗಲಿಲ್ಲ. ಈ ಕುರಿತು ಮನಸು ಬಿಚ್ಚಿ ಬರೆದಿದ್ದಾರೆ. ಪುಸ್ತಕ ಓದುವಾಗ ಸ್ವಲ್ಪ ಅಸೌಕರ್ಯ ಅನಿಸುತ್ತದೆ ಏಕೆಂದರೆ ಇಲ್ಲಿ ಗ್ರಾಂಥಿಕ ಭಾಷೆ ಓದಿದ ನಮಗೆ ಈ ಪದಗಳು ತುಂಬಾ ಬೋಲ್ಡ್ ಅನಿಸುತ್ತವೆ. ಆದರೆ ಈಗಲಾದರೂ ನಾವು ಮೈಚಳಿ ಬಿಟ್ಟು ಓದಿ ತಿಳಿದುಕೊಂಡು ಮುಕ್ತವಾಗಿ ಮಾತಾಡಬೇಕು.ಈ ಪುಸ್ತಕ ಖಂಡಿತ ಓದುಗರ ಮನ ಪರಿವರ್ತನೆ ಮಾಡುತ್ತದೆ. ಇದಕ್ಕಾಗಿ ಅಕ್ಕಯ್ ಮತ್ತು ಮಾಳವಿಕಾ ಅವರನ್ನು ಅಭಿನಂಧಿಸುತ್ತೇನೆ. ಈ ಪುಸ್ತಕ ನಮ್ಮ ಕಣ್ಣು ತೆರೆಸಿದೆ. LGBTQAI++ಆಗಿ ನಾವು ರೇನ್ಬೋ ಡ್ರೆಸ್ ಹಾಕಿಕೊಂಡು ವರ್ಷಕ್ಕೊಮ್ಮೆ ಪ್ರತಿಭಟನೆ ಮಾಡಿದ್ರೆ 2014 ರ NLSA ತೀರ್ಪು ಮತ್ತು 2018 ರ ತೀರ್ಪುಗಳು ಬಂದಿಲ್ಲ. ಅಕ್ಕಯ್ ಮತ್ತು ಇನ್ನಿತರರು ತಳಮಟ್ಟದಲ್ಲಿ ಗುರುತಿಸಿಕೊಂಡು ಬೀದಿಗಿಳಿದು ಹಗಲಿರುಳು ಹೋರಾಡಿದ್ದರಿಂದಲೇ ಈ ತೀರ್ಪು ಮತ್ತು ಬದಲಾವಣೆ ಬಂದಿದೆ. ನಾವೇನು ಮಾಡಿದ್ದೀವಿ? ರೂಮ್ನಲ್ಲಿ ಒಂದು ಕಡೆ ಕುಂತು ಅತ್ತಿದ್ದೇವೆ, ಡಿಪ್ರೆಶನ್ ಗೆ ಒಳಗಾಗಿದ್ದೀವಿ. ಅಷ್ಟೇ.ಈ ಪುಸ್ತಕ ಇಂಗ್ಲಿಷ್ ಗೆ  ತರ್ಜುಮೆ ಮಾಡಲು ಎಲ್ಲಾ ಸಹಾಯ ನಾನು ಮಾಡುತ್ತೇನೆ. ಒಂದೆಡೆ ಜೊತೆ ನಾನು ಸದಾ ಇರುತ್ತೇನೆ. ಈ ಪುಸ್ತಕವನ್ನು ಎಲ್ಲರೂ ಕೊಂಡು ಓದಿ. ನಿಮ್ಮ ಗೆಳೆಯ ಗೆಳತಿಯರಿಗೆ ಉಡುಗೊರೆಯಾಗಿ ಕೊಡಿ. ನನ್ನ ಒಂದು ನಾಟಕಕ್ಕೆ ಅಕ್ಕಯ್ ಯವರು ಬಂದಾಗ ಅಲ್ಲೇ ಇದ್ದ ಮತ್ತೊಬ್ಬ ಹೋರಾಟಗಾರ್ತಿ ಈ ತರದ  ನಾಟಕಗಳನ್ನು ಅಕ್ಕಯ್ ನೀವೂ ಮಾಡಬೇಕು ಅಂತ ಹೇಳಿದರು . ನಾನು ಕೇಳುತ್ತೇನೆ ಅಕ್ಕಯ್  ಯಾಕೆ ಮಾಡಬೇಕು ನಾವೂ ಮಾಡಬೇಕಲ್ಲ. ನಮ್ಮೆಲ್ಲರಿಗೂ ಜವಾಬ್ದಾರಿ ಇದೆಯಲ್ವಾ.ಇಲ್ಲಿ ನಾನು ಅತಿಥಿಯಾಗಿ ಬಂದಿಲ್ಲ ನಿಮ್ಮಲ್ಲಿ ಒಬ್ಬರಾಗಿ ಬಂದಿದ್ದೀನಿ ಎಂದು ಹೇಳಿದರು.

ಕುಮಾರಿ ಅಬೀದ ಬೇಗಂ :



ಅಟೆಂಷನ್  ಪ್ಲೀಸ್ ಪುಸ್ತಕದಲ್ಲಿ ನಾನೂ ಒಂದು ಭಾಗ. ಪುಸ್ತಕ ಚೆನ್ನಾಗಿದೆ. ನಮ್ಮ ಸಮುದಾಯದ ಎಲ್ಲಾ ಪ್ರಕಾರಗಳ ಬಗ್ಗೆ ಬೆಳಕು ಚೆಲ್ಲಿದೆ. ಅಕ್ಕಯ್ ಅವರು ಇವತ್ತು ನಮಗೆ ಬದುಕಿನ ಬಗೆಗೆ ಹುಮ್ಮಸ್ಸನ್ನು, ಉತ್ಸಾಹವನ್ನು ಕೊಟ್ಟಿದ್ದಾರೆ. ಮಾಳವಿಕಾ ನಮ್ಮನ್ನು ಗುರುತಿಸಿ ಸಮುದಾಯಕ್ಕೆ ಪರಿಚಯ ಮಾಡಿದರು. ಹುಟ್ಟುತ್ತಲೆ ಎರಡು ಲಿಂಗಗಳೊಂದಿಗೆ ಹುಟ್ಟಿದ ಮಕ್ಕಳನ್ನು ಅಂತರ್ಲಿಂಗಿ ಮಕ್ಕಳು ಎನ್ನುತ್ತಾರೆ. ನಾನು ಅಂತರ್ಲಿಂಗಿ ಹೆಣ್ಣು ನಮ್ಮ ಅಣ್ಣಅಂತರ್ಲಿಂಗಿ ಗಂಡು. ನಿನ್ನೆ ಕರ್ನಾಟಕ ರಾಜ್ಯ ಅಂತರ್ಲಿಂಗಿ ಅಸೋಸಿಯೇಷನ್ ಇನಾಗ್ರೇಶನ್ ಆಗಿದೆ. ಲಿಂಗ -ಲಿಂಗತ್ವ -ಲೈಂಗಿಕತೆ  ಬಗ್ಗೆ ಸಮಾಜಕ್ಕೆ ಇನ್ನೂ ಹೆಚ್ಚು ಅರಿವು ಮೂಡಿಸಬೇಕು. ಆದರೆ ಅಂತರ್ಲಿಂಗೀ ಸಮುದಾಯವು ಹೊರಗಡೆ ಬರಬೇಕು. ನಮ್ಮ ಮಧ್ಯ ಆಗುತ್ತಿರುವಂತ ಕಳಂಕ ತರತಮ್ಯದ, ದೌರ್ಜನ್ಯಗಳು, ಅನ್ಯಾಯಗಳ ಬಗ್ಗೆ ಎಲ್ಲರಿಗೂ ತಿಳಿಸಬೇಕು. ನಾನು ಹಾಸ್ಪಿಟಲ್ಗೆ ಹೋದಾಗ ಒಬ್ಬ ಡಾಕ್ಟರ ನನ್ನನ್ನು ಹೆಣ್ಣೋ -ಗಂಡೋ ಅಂತ ಗುರುತಿಸಲು ಸಾಧ್ಯವಾಗಲಿಲ್ಲ. ಆದರೆ ಒಂದೆಡೆ ಸಂಸ್ಥೆಯಲ್ಲಿ ಅಕ್ಕಯ್ ಅವರು ನನ್ನನ್ನು ಅಂತರ್ಲಿಂಗಿ ಹೆಣ್ಣು ಮತ್ತು ನಮ್ಮ ಅಣ್ಣನನ್ನು ಅಂತರಲಿಂಗಿ ಗಂಡು ಎಂದು ಗುರುತಿಸಿದರು. ಈ ಪುಸ್ತಕದಲ್ಲಿ ನಮ್ಮ ಸಮುದಾಯದ ಎಲ್ಲರ ಜೀವನ ಕಥೆ ಇದೆ.ಇದನ್ನು ಓದಿದ ನಂತರ ಇಡೀ ಸಮಾಜದಲ್ಲಿ ನಮ್ಮ ಬಗ್ಗೆ ಇರುವ ತಪ್ಪು ಕಲ್ಪನೆಗಳು ಕಡಿಮೆಯಾಗುತ್ತವೆ ಎಂದು ನಂಬಿಕೆ ಇದೆ.

ಶ್ರೀ ಪೃಥ್ವಿ :



ಎಲ್ಲರಿಗೂ ಟ್ರಾನ್ಸಜೇಂಡೆರ್ ಹ್ಯೂಮನ್ ಗೊತ್ತಿರುತ್ತದೆ ಆದ್ರೆ  ಟ್ರಾನ್ಸ್ ಮ್ಯಾನ್ ಬಗ್ಗೆ ಇಲ್ಲಿರುವ 2% ಜನಕ್ಕೆ ಮಾತ್ರ ಗೊತ್ತಿರುತ್ತೆ. ಆದ್ರೆ ಟ್ರಾನ್ಸ್ ಮ್ಯಾನ್ ಬಗ್ಗೆ ಯಾರಿಗೂ ಗೊತ್ತಿರುವುದಿಲ್ಲ. ನಾನು ಹುಡುಗಿಯಾಗಿ ಹುಟ್ಟಿದ್ರು ಹುಡುಗನ ಭಾವನೆಗಳೊಂದಿಗೆ ಬೆಳೆಯುತ್ತಿದ್ದೆ. ನನ್ನ ಅಟ್ರಾಕ್ಷನ್, ಇಷ್ಟ - ಅಇಷ್ಟಗಳು ಕೂಡ ಹುಡುಗರ ತರಾನೇ ಇತ್ತು. ಈಗ ನಾನು ಸಾಫ್ಟ್ ವೇರ್ ಇಂಜಿನಿಯರ್ ಆಗಿ ಕೆಲಸ ಮಾಡ್ತಾ ಇದ್ದೀನಿ. ನನ್ನ ತಂದೆ ತಾಯಿಗಳು ಮತ್ತು ನಮ್ಮ ಕಂಪನಿಯವರು ನನಗೆ ತುಂಬಾ ಸಹಾಯ, ಸಹಕಾರ, ಬೆಂಬಲ ಕೊಟ್ಟ ನಂತರ ನಾನು ಮ್ಯಾನ್ ಆಗಿ ಪರಿವರ್ತನೆ ಆಗಿದ್ದೇನೆ . ನಮ್ಮ ಸಮುದಾಯಕ್ಕೆ ಫಸ್ಟ್ ಕುಟುಂಬದ ಬೆಂಬಲ ಇರುವುದಿಲ್ಲ. ಈ ವಿಷಯದಲ್ಲಿ ನಾನು ತುಂಬಾನೇ ಸುಧೈವಿ.98% ಸಮುದಾಯಕ್ಕೆ ಕುಟುಂಬದ ಬೆಂಬಲ ಸಿಗುವುದಿಲ್ಲ. ಶಿಕ್ಷಣ,ಕೆಲಸ ಮತ್ತು ಗುರುತಿನ ಚೀಟಿಗಳು ಇರುವುದಿಲ್ಲ. ಯಾರು ಕೆಲಸ ಕೊಡಲ್ಲ. ದುಡ್ಕೊಂಡು ಬದುಕೋದಕ್ಕೆ ಏನಾಯ್ತು ಅಂತ ಕೇಳುತ್ತಾರೆ?ನಾವೆಲ್ಲ ಸಮಾನರು  ಅಂತ ತಿಳ್ಕೊಳ್ಳಿಕ್ಕೆ,ನಮ್ಮನ್ನು ಸಹ ಸಮಾನರಾನ್ನಾಗಿ ಕಾಣಲು ಎಲ್ಲರೂ ಈ ಪುಸ್ತಕ

ಓದಲೇಬೇಕು. ಈ ಪುಸ್ತಕದ ಓದಿದವರು ನಮ್ಮ ಸಮುದಾಯದ ಆಳ ಅಗಳಗಳನ್ನು ತಿಳಿದುಕೊಳ್ಳುತ್ತಾರೆ.ನಮ್ಮ  ಸಮುದಾಯದ ಬಗ್ಗೆ ಸಂಪೂರ್ಣವಾಗಿ ಮಾಹಿತಿಯನ್ನು ತಿಳಿದುಕೊಳ್ಳುತ್ತಾರೆ.ಅದಕ್ಕಾಗಿ ಎಲ್ಲರೂ ಪುಸ್ತಕ ಓದಿ. ಈ ಪುಸ್ತಕ ಓದಿದ್ಮೇಲೆ ಇಮ್ಮಿಡಿಯೇಟ್ ಆಗಿ ಕಾಲ್ ಮಾಡಿ ನಾನು ಒಂದೆಡೆ ಒಂದು ಭಾಗ ಆಗಬೇಕು ಎಂದು ಅಕ್ಕಯ್ ಅವರನ್ನು ಕೇಳಿಕೊಂಡಾಗ ಒಂದೆಡೆ ಮೆಂಬರ್ ಆಗಿ ಆಯ್ಕೆ ಮಾಡಿದರು. ಮೊದಲು ಮಾನವೀಯತೆ ಇರಬೇಕು. ಕೆಲಸ ಮಾಡಲು ಯೋಗ್ಯರಾದ ವ್ಯಕ್ತಿಗಳಿಗೆ ಕೆಲಸವನ್ನು ಕೊಡಬೇಕು. ಲಿಂಗಧಾರದ ಮೇಲೆ ಕೆಲಸ ಕೊಡೋದು ತಪ್ಪು. ಟ್ರಾನ್ಸ್ ಜೇಂಡರ್ ಅನ್ನು ಒಂದೇ ಒಂದು ಅಂಬ್ರೆಲಾದಲ್ಲಿ ನಮ್ಮನ್ನೆಲ್ಲಾ ಗುರುತಿಸುತ್ತಾರೆ. ನನ್ನ ದೇಹ ಹುಡುಗಿ ಆಗಿರೋದ್ರಿಂದ ಮನೆ ಬಿಟ್ಟು ನಾನು ಹೊರಗಡೆ ಬಂದು ಜೀವಿಸುವುದು ತುಂಬಾ ಕಷ್ಟ. ಟ್ರಾನ್ಸ್ ಹ್ಯೂಮನ್ ಹೊರಗಡೆ ಬಂದಿದ್ದಾರೆ, ಅಂದ್ರೆ ಅವರನ್ನಷ್ಟೇ ಗುರುತಿಸೋದಿಲ್ಲ ಅವರ ಜೊತೆ ನಾವೂ ಇದ್ದೀವಿ. ನಮ್ಮ ಸಮುದಾಯವು ಆತಂಕದಲ್ಲಿ ಬದುಕ್ತಾ ಇದೆ.ಬೇರೆ ಬೇರೆ ಸಮುದಾಯಕ್ಕೆ ಹೋಲಿಸಿದಾಗ ತುಂಬಾ ಹೆಚ್ಚು ಕಷ್ಟಗಳಿವೆ. ನಮಗೆ ಮೂಲಭೂತ ಹಕ್ಕುಗಳ ಇಲ್ಲ. ನಾನು ಯಾವ ಬಟ್ಟೆ ಹಾಕಬೇಕು, ಹೇಗೆ ಮಾತಾಡಬೇಕು ಅನ್ನೋದನ್ನು ಸಮಾಜವೇ ನಿರ್ಧರಿಸುತ್ತದೆ . ನಾನು ಹುಡುಗಿ ಅಂತ ಎಲ್ಲರೂ ಬಂದು ಹೇಳುತ್ತಾರೆ. ಆದರೆ ನಾನು ಹುಡುಗಿಯಲ್ಲ ನಾನು ಹುಡುಗ ಅನ್ನೋದು ನನಗೆ ಗೊತ್ತು.ನಾನು ಏನು ಅಂತ ನನಗೆ ಗೊತ್ತಿರುತ್ತೆ. ಸೋ ಈ ನಿಟ್ಟಿನಲ್ಲಿ ಪುಸ್ತಕವೂ ತುಂಬಾ ಸಶಕ್ತವಾಗಿದೆ. ಈ ಪುಸ್ತಕವನ್ನು ಗಿಫ್ಟ್ ಆಗಿ ಕೊಡಿ ಎಲ್ಲರಿಗೂ ಹೇಳಿ ಇದರ ಬಗ್ಗೆ. ಯಾವುದ್ಯಾವುದಕ್ಕೊ ಎಷ್ಟೆಷ್ಟೋ ಟೈಮ್ ವೇಸ್ಟ್ ಮಾಡ್ತೀವಿ. ಒಂದು ಎರಡು ಮೂರು ತಾಸು ಟೈಮ್ ಕೊಟ್ಟು ಓದೋದ್ರಿಂದ ಎಷ್ಟೋ ಮನ ಪರಿವರ್ತನೆ ಆಗುತ್ತೆ.

ಮಾಳವಿಕಾ (ಲಕ್ಷ್ಮಣ್ ಕನಕುಂಟ್ಲಾ ):



ಈ ಪುಸ್ತಕದ ಸಂಪಾದಕಿಯರಾಗಿ ಯಾರ ಹೆಸರು ಹಾಕೋಣ ಅಂತ ಚಂದವರು ಕೇಳಿದಾಗ. ಅಕ್ಕಯ್ ಹೆಸರು ಮೇಲೆ ಹಾಕಿ ನನ್ನೆಸರು ಕೆಳಗೆ ಹಾಕಿ ಅಂತ ನಾವು ನಿರ್ಧಾರ ಮಾಡಿದ್ದೀವಿ. ನಾನು ತುಂಬಾ ಕಡೆಗಳಲ್ಲಿ ತುಂಬಾ ಕಷ್ಟಪಟ್ಟು ಕೆಲಸ ಮಾಡಿದ್ರು ಎಲ್ಲಿ ನನಗೆ ಒಂದು ಹೆಸರು ಸಿಗಲಿಲ್ಲ. ಇದೇ ಮೊದಲ ಬಾರಿಗೆ ಒಂದು ಪುಸ್ತಕದ ಮೇಲೆ ನನ್ನ ಹೆಸರು ಬಂದಿರೋದು ತುಂಬಾ ಸಂತೋಷ ಆಗ್ತಾ ಇದೆ ಹಾಗೇನೆ ಆಶ್ಚರ್ಯ ಆಗ್ತಾ ಇದೆ. ಅಕ್ಕಯ್  ಅವರು ನನ್ನ ಗುರುಗಳಾಗಿ ಮಾರ್ಗದರ್ಶನ ನೀಡಿ ಬೆಂಬಲ ಕೊಟ್ಟು ನಡೆಸಿದ್ದರಿಂದಲೇ ಈ ಪುಸ್ತಕ ಬರೆಯೋದಕ್ಕೆ ಸಾಧ್ಯವಾಯಿತು. ನಾನು ಸಾವಿರ ಹೆಜ್ಜೆಗಳನ್ನು ಹಾಕಿರಬಹುದು ಆದರೆ ಆ ಮೊದಲ ಹೆಜ್ಜೆ ಹಾಕಿಸಿದ್ದು ಮಾತ್ರ ಅಕ್ಕಯ್ ಅವರು. ಅವರಿಗೆ ಎಷ್ಟು ಧನ್ಯವಾದಗಳು ಹೇಳಿದ್ರುನು ಕಮ್ಮಿನೇ. ಈ ಪುಸ್ತಕವನ್ನು ಮುದ್ರಿಸಲು ನಮ್ ಹತ್ರ ದುಡ್ಡಿರಲಿಲ್ಲ. ಒಳ್ಳೆ ಕೆಲಸಕ್ಕೆ ಯಾರು ದುಡ್ಡು ಕೊಡೋದುನೂ ಇಲ್ಲ. ಆದರೆ ನಮ್ಮ ಬೋರ್ಡನ್ನು ನಾವು ಕೇಳಿದಾಗ ನಮ್ಮ ಬೋರ್ಡ್ನ ಎಲ್ಲ ಅಧ್ಯಕ್ಷರು, ಸದಸ್ಯರು ನಮಗೆ ಬೆಂಬಲ ನೀಡಿ ಎಷ್ಟು ದುಡ್ಡಾದರೂ ಹೋಗ್ಲಿ ಪರವಾಗಿಲ್ಲ ಈ ಪುಸ್ತಕವನ್ನು ನಾವು ಮುದ್ರಿಸಿ ಹೊರಗಡೆ ತಗೊಂಡು ಬರೋಣ ಅಂದ್ರು.ನೋಡೋಣ ಎಷ್ಟು ಜನ ಒಳ್ಳೆಯ ವಿಷಯಗಳಿಗೆಬೆಂಬಲಿಸಿತ್ತಾರೆ ಎಂದು ಹೇಳಿ.ನಾವು  ಖರ್ಚು ಮಾಡಿದ ದುಡ್ಡು ವಾಪಸ್ ಬರುತ್ತಾ ಇಲ್ಲ ಯೋಚನೆ ಮಾಡೋದೇ ಬೇಡ ಆದರೆ ಇಂಥ ಒಂದು ಒಳ್ಳೆಯ ವಿಷಯಗಳನ್ನು ಎಷ್ಟು ಜನ ಸ್ವೀಕರಿಸುತ್ತಾರೆ ಅನ್ನೋದನ್ನ ನಾವು ನೋಡೋಣ ಎಂದು ಹೇಳಿದರು. ಈ ಬುಕ್ಕಿಗೆ ಚಾಂದ್ ಕವಿ ಅವರು ಮತ್ತು ವಿನಯ್ ಅವರು ತುಂಬಾನೇ ಸಹಾಯ ಮಾಡಿದರು. ಚಂದ್ ಅವರು ನಿರಂತರವಾಗಿ ಬೆಂಬಲ ಸಹಕಾರ,ಮಾರ್ಗದರ್ಶನವನ್ನು ನೀಡಿದರು. ಅಕ್ಕಯ್ ಅವರು ಎರಡು ಟೈಟಲ್ ಗಳನ್ನು ಫೈನಲ್ ಮಾಡಿದ್ರೆ ಅಟೆಂಷನ್ ಪ್ಲೀಸ್ ಅನ್ನೋ ಟೈಟಲನ್ನು ಚಾಂದ್ ಅವರು ಫೈನಲ್ ಮಾಡಿದರು. ವಿನಯವರು ಸರಿ ಸುಮಾರು ಐದರಿಂದ ಆರು ಸಲ ಈ ಪುಸ್ತಕವನ್ನು ತಿದ್ದಿದ್ರು. ನಾವು ಫೋನ್ ಮಾಡಿ ಹೇಳಿದಾಗಲೆಲ್ಲ ಅದನ್ನು ತಿದ್ದುತ್ತಾನೆ ಇದ್ದರೂ.  ಅನಾರೋಗ್ಯವಿದ್ದರೂ

ಕೂಡ ರಾತ್ರಿ ಹಗಲು ಕೆಲಸ ಮಾಡಿದ್ದರು.ಈ ಪುಸ್ತಕದಲ್ಲಿ ಕಲ್ಪಿಸಿಕೊಂಡು, ಊಹಿಸಿಕೊಂಡು ಏನು ಬರೆದಿಲ್ಲ.ಎಲ್ಲಾ ಪ್ರಾಕ್ಟಿಕಲ್ ಆಗಿ ಬರೆದಿದ್ದೇವೆ. ಸಂವಾದ,ಸಂದರ್ಶನ, ವಿಚಾರ ಸಂಕಿರಣಗಳಲ್ಲಿ ನಮ್ಮ ಸಮುದಾಯದವರು ಏನು ಮಾತಾಡಿದರೋ ಅದೇ ಪದಗಳನ್ನು ಭಾಷೆಯನ್ನು ಇಲ್ಲಿ ಬಳಸಿದ್ದೀವಿ. ಗ್ರಾಂಥಿಕ ಭಾಷೆಯ ಮೊರೆ ಹೋಗದೆ ನಮ್ಮ ಸಮುದಾಯದ ಧ್ವನಿಯಲ್ಲಿರುವ ಆ ಸೊಗಡನು,ರುಚಿಯನ್ನು ಪರಿಚಯಿಸುವ ಪ್ರಯತ್ನವನ್ನು ಮಾಡಿದ್ದೇವೆ. ಅಕ್ಷತಾ ಪಾಂಡವಪುರ ಅವರು ಈ ಪುಸ್ತಕವನ್ನು ತುಂಬಾ ಚೆನ್ನಾಗಿ ಡೆಪ್ತ್ ಆಗಿ ಓದಿದ್ದಾರೆ.ಅವರಿಗೆ ಈ ಪುಸ್ತಕದ ಭಾಷೆಯ ಸೊಗಡು ಮತ್ತು ರುಚಿ ಗೊತ್ತಾಗಿರುತ್ತದೆ ಎಂದು ಕೇಳಿದಾಗ ಆಗ ಅವರು ಹೌದು ಎಂದು ಉತ್ತರಿಸಿದರು. ಪುಸ್ತಕ ಬಿಡುಗಡೆಗೆ,ಮುದ್ರಣಕ್ಕೆ ದುಡ್ಡಿನ ಸಮಸ್ಯೆ ಎದುರಾದಾಗ ಅಕ್ಕಯ್ ಅವರು ಏನು ಚಿಂತೆ ಮಾಡಬೇಡಿ ನಾಲ್ಕು ಕಡೆ ಭಿಕ್ಷೆ ಬೇಡಿ ಆದರೂ ಈ ಪುಸ್ತಕವನ್ನು ನಾನು ಬಿಡುಗಡೆ ಮಾಡುತ್ತೇನೆ ಎಂದು ಧೈರ್ಯವನ್ನು ತುಂಬಿದರು. ಪುಸ್ತಕದಲ್ಲಿರುವ ಪಾತ್ರಗಳಾದ ಪೃಥ್ವಿ, ಗೀತಾ, ಅಭಿದ ಇಲ್ಲೇ ಇದ್ದೀವಿ ಆದರೆ ನಮ್ಮ ಯೋಜನೆಯ ಪ್ರಕಾರ ಈ ಪುಸ್ತಕದಲ್ಲಿ ಇರುವ ಎಲ್ಲರನ್ನೂ ಕೂಡ ನಾವು ಕರೆಸಿ ಪುಸ್ತಕ ಬಿಡುಗಡೆ ಕಾರ್ಯಕ್ರಮ ಮಾಡಬೇಕೆಂದು ಆಸೆಯನ್ನು ಪಟ್ಟಿದ್ವಿ. ಆದರೆ ಅವರಿಗೆ ಪ್ರಯಾಣ ಭತ್ಯ,ವಸತಿ,ಊಟ ಕೊಡುವಷ್ಟು ದುಡ್ಡು ನಮ್ಮತ್ರ ಇಲ್ಲದ ಕಾರಣ ಇಷ್ಟಕ್ಕೆ ಕಾರ್ಯಕ್ರಮವನ್ನು ಮಟಕುಗಳಿಸಿಕೊಂಡಿದ್ದೇವೆ. ಪುಸ್ತಕದ ಬಗ್ಗೆ ನಾನ್ ಮಾತಾಡೋದು ಏನೂ ಇಲ್ಲ ಯಾಕಂದ್ರೆ ಪುಸ್ತಕವೇ ಮಾತಾಡುತ್ತದೆ. ಶ್ರೀಮತಿ ಅಕ್ಷತಾ ಪಾಂಡವಪುರ ಅವರು ಮಾತಾಡ್ತಿದ್ರೆ ಪುಸ್ತಕದಲ್ಲಿ ಇಷ್ಟು ಆಳವಿದೆಯಾ ಎಂದು ಆಶ್ಚರ್ಯವಾಯಿತು. ಅವರು ಪುಸ್ತಕದೊಂದಿಗೆ ತುಂಬಾ ಕನೆಕ್ಟ್ ಆಗಿದ್ದಾರೆ ಅನ್ನೋದು ಗೊತ್ತಾಯ್ತು.ಹಾಗೇನೆ ನಮ್ಮ ವಿನಯ್ ಅವರು ಕೂಡ ಟೈಪ್ ಮಾಡುವಾಗ ಪುಸ್ತಕ ತುಂಬಾ ಚೆನ್ನಾಗಿದೆ ಅಂತ ಹೇಳಿದರು. ಪುಸ್ತಕದಲ್ಲಿ ಏನು ಹೇಳಬೇಕು ಅದೆಲ್ಲ ಆಶಯ ನುಡಿಯಲ್ಲಿ ಹೇಳಿದ್ದೇವೆ . ನಮ್ಮ ಸಮುದಾಯ ತಿಳಿದೋ ತಿಳಿಯದೇನೋ ಮಾಡಿದ ತಪ್ಪುಗಳನ್ನು ಭೂತಗನ್ನಡಿಯಲ್ಲಿ ನೋಡುವಂತಹ ಸಮಾಜ ನಮಗೆ ಆಗುತ್ತಿರುವ ಅನ್ಯಾಯ, ಶೋಷಣೆಗಳನ್ನು ಬರಿಗಣ್ಣಿನಿಂದ ಆದ್ರೂ ನೋಡುವ ಸೌಜನ್ಯತೆವನ್ನು ತೋರುತ್ತಿಲ್ಲ ಏಕೆ? ನಿಮ್ಮ ಜೊತೆಗೆ ಬದುಕುತ್ತಿರುವ ನಮ್ಮನ್ನು ತಾತ್ಸಾರ,ಅಸಡ್ಡೆ ಉದಾಸೀನ ಮಾಡಬೇಡಿ ನಮ್ಮ ಬಗ್ಗೆ ಸ್ವಲ್ಪ ಅಟೆಂಶನ್ ಪ್ಲೀಸ್ ಅಂತ ಹೇಳುತ್ತಾ ತುಂಬಾ ಧನ್ಯವಾದಗಳು.

ಡಾ. ಅಕ್ಕಯ್ ಪದ್ಮಶಾಲಿ :





ಪುಸ್ತಕ ತುಂಬಾ ಚೆನ್ನಾಗಿದೆ. ಇನ್ನು ಹೆಚ್ಚು ಪುಸ್ತಕಗಳನ್ನು ಹೋರತರುತ್ತೇವೆ.ರಂಗಭೂಮಿ, ಸಿನೆಮಾಗಳಲ್ಲಿ ಅವಕಾಶ ಕೊಡ್ತಿನಿ ಅಂತಾನೂ ಹೇಳಿದ್ದಿರಿ. ಈ ಕಾರ್ಯಕ್ರಮಕ್ಕೆ ಆಗಮಿಸಿ ಯಶಸ್ವಿಗೊಳಿಸಿದ ಎಲ್ಲರಿಗೂ ವಂದನೆಗಳು.